ಸಾಹೇಬರು ಅವನನ್ನು ನೋಡಿದೊಡನೆಯೇ ಹಳೆಯ ಮಿತ್ರನಂತೆ ಪ್ರೀತಿಯಿಂದ ಕೈಕುಲುಕಿದರು. ನಂತರ ಅವನ ಕೈಯನ್ನು ಹಿಡಿದು ತುಂಬಾ ವ್ಯಗ್ರತೆಯಿಂದ ಹೇಳಿದರು

'ಹರಿಲಾಲ್, ನೀವಿಷ್ಟು ತೊಂದರೆಯಲ್ಲಿದ್ದೀರ, ಆದರೂ ಬಾಪೂ ಮತ್ತು ನಿಮ್ಮ ಜಾತಿಯವರು ಸಹಾಯಕ್ಕೆ ಮುಂದೆ ಬರದಿರುವುದು ತುಂಬಾ ದುಃಖದ ವಿಷಯ. ನಿಮ್ಮ ಆರೋಗ್ಯವೂ ತುಂಬಾ ಹದಗೆಟ್ಟಿದೆ. ನಾನು ರಾಜಕೀಯವಾಗಿ ನಿಮ್ಮೊಂದಿಗಿರದಿದ್ದರೂ, ಮಾನವೀಯ ದೃಷ್ಟಿಯಿಂದ ನಿಮಗೆ ಸಹಾಯವನ್ನು ಮಾಡುವುದು ನನ್ನ ಕರ್ತವ್ಯ. ನೀವು ಇಷ್ಟಪಟ್ಟರೆ ನಮ್ಮ ಧರ್ಮಶಾಲೆಯಲ್ಲಿ ಸಮಯವನ್ನು ಕಳೆಯಿರಿ. ನೀವು ಹೇಳಿದರೆ, ನನ್ನ ಬಂಗ್ಲೆಯಲ್ಲಿ ನಿಮಗಾಗಿ ವ್ಯವಸ್ಥೆಯನ್ನು ಮಾಡುತ್ತೇನೆ. ಆದರೆ ಈಗ ನಾನು ನಿಮ್ಮನ್ನು ಈ ಪರಿಸ್ಥಿತಿಯಲ್ಲಿ ಇರಲು ಬಿಡುವುದಿಲ್ಲ. ಖುದಾ ಇಂಥ ಒಳ್ಳೆಯ ಕೆಲಸಕ್ಕೆ ಆಶೀರ್ವದಿಸುತ್ತಾನೆ.'

'ಜನಾಬ್, ನಿಮ್ಮ ಭಾವನೆಗಳಿಗೆ ನಾನು ಕೃತಜ್ಞನಾಗಿದ್ದೇನೆ. ಆದರೆ ನಿಮ್ಮ ಕೃಪೆಯಲ್ಲಿರುವುದು ನನಗೆ ಉಚಿತವಾಗಲಾರದು. ಅಲ್ಲದೆ ನಾನು ನಿಮ್ಮ ಉಪಕಾರದ ಋಣವನ್ನು ಹೇಗೆ ತೀರಿಸುವುದು...'

'ಹರಿಲಾಲ್, ಇದೇನು ಹೇಳುತ್ತಿದ್ದೀರಿ?' ಜಕಾರಿಯಾ ಅವರು ಭಾರಿ ಆಘಾತವನ್ನು ಅನುಭವಿಸಿದವರಂತೆ ತಮ್ಮ ನಾಲಿಗೆಯನ್ನು ಕಚ್ಚಿಕೊಂಡರು.

'ನಾನು ನಿಮಗೆ ಯಾವ ಉಪಕಾರವನ್ನೂ ಮಾಡುತ್ತಿಲ್ಲ, ಇನ್ನು ಸೇಡಿನ ವಿಷಯವಂತೂ ದೂರ. ನೀವೊಬ್ಬರು ಪವಿತ್ರ ಮತ್ತು ಪ್ರಾಮಾಣಿಕ ವ್ಯಕ್ತಿಯಾಗಿದ್ದೀರ. ನಿಮಗೆ ಇರಲು ಮನೆಯ ಅಗತ್ಯವಿದೆ. ಮಕ್ಕಳು ಮತ್ತು ಪರಿವಾರದ ಅಗತ್ಯವಿದೆ. ಖುದಾನ ಕೃಪೆಯಿಂದ ಇವೆಲ್ಲವೂ ನಿಮಗೆ ಸಿಗುವುದು. ನಿಮ್ಮ ಆಶೀರ್ವಾದವೇ ನನ್ನ ಋಣವನ್ನು ತೀರಿಸುವುದು...'

'ಜಕಾರಿಯಾ ಸಾಹೇಬರೇ, ನನ್ನ ಆಶೀರ್ವಾದ ನಿಮಗೆ ಖಂಡತ ಸಿಗುವುದು' ಹರಿಲಾಲ ಜಕಾರಿಯಾ ಅವರ ಬಲೆಗೆ ಬೀಳುತ್ತಿದ್ದ.

'ಆದರೆ ಈ ಆಶೀರ್ವಾದಗಳನ್ನು ಹೊರತುಪಡಿಸಿ ನಿಮಗೆ ನನ್ನಿಂದ ಏನೇನು ಬೇಕೋ, ಅವುಗಳನ್ನು ಸ್ಪಷ್ಟವಾಗಿ ತಿಳಿಸಿದರೆ ನನಗೆ ಅರ್ಥವಾಗುತ್ತದೆ. ನಿಮ್ಮ ಬಾಪೂ ಮತ್ತು ನಿಮ್ಮ ಕಾಂಗ್ರೆಸ್ ನಿಮ್ಮ ಮಾತುಗಳನ್ನು ಕೇಳಿಲ್ಲ ಎಂಬುದು ನಿಮಗೆ ತಿಳಿದೇ ಇದೆ. ನಿಮ್ಮ ಕನಿಷ್ಟ ಅಗತ್ಯಗಳನ್ನೂ ಸಹ ಈಡೇರಿಸಲು ನಿಮ್ಮ ಬಾಪೂ ಅವರ ಹಿಂದೂ ಜನಾಂಗ ನಿಮ್ಮನ್ನು ತಡೆಯುತ್ತಿದೆ. ನೀವೀಗ ಒಂಟಿಯಾಗಿದ್ದೀರ. ಪಾಕ್ ಪರ ವರದಿಗಾರ್, ನಿಮಗೆ ಇಸ್ಲಾಂ ಮಡಿಲಿನಲ್ಲಿ ಆಶ್ರಯವನ್ನು ಕೊಡುತ್ತಾರೆ. ನಿಮ್ಮೆಲ್ಲಾ ದುಃಖಗಳು ದೂರವಾಗುತ್ತವೆ. ಭ್ರಾತೃತ್ವವೇ ಮುಹಮ್ಮದ್ ಸಾಹೇಬರ ಆದರ್ಶವಾಗಿದೆ. ಹರಿಲಾಲ್, ಇಸ್ಲಾಂನಲ್ಲಿ ಯಾರೂ ಚಿಕ್ಕವರಲ್ಲ, ಯಾರೂ ದೊಡ್ಡವರಲ್ಲ.'

ಹರಿಲಾಲನ ಮನಸ್ಸಿನಲ್ಲಿ ಈಗ ಇಸ್ಲಾಂನ ಯಾವುದೇ ಆದರ್ಶಕ್ಕೆ ಮೌಲ್ಯವೇ ಇರಲಿಲ್ಲ. ಒಂದು ವೇಳೆ ಈಗ ತಾನು ಜಕಾರಿಯಾ ಅವರ ಮಾತನ್ನು ಒಪ್ಪಿ ಧರ್ಮಪರಿವರ್ತನೆ ಮಾಡಿಕೊಂಡರೆ ತನಗೇನು ಸಿಗುವುದು, ನಂತರ ಬಾಪೂ ಅವರ ಪ್ರತಿಕ್ರಿಯೆ ಏನಾಗಬಹುದು ಎಂದು ಹರಿಲಾಲ ತನ್ನ ಮನಸ್ಸಿನಲ್ಲಿ ಗುಣಾಕಾರ ಭಾಗಾಕಾರವನ್ನಷ್ಟೇ ಮಾಡುತ್ತಿದ್ದ. ಹರಿಲಾಲ ತತ್ಕಾಲಕ್ಕೆ ಈ ಸತ್ವರಹಿತ ಸಂತೋಷವನ್ನೇ ತನ್ನ ಗೆಲುವೆಂದು ಭಾವಿಸಿ ಮುಂದುವರೆಯುತ್ತಿದ್ದ.

ಅಂದು ತಡರಾತ್ರಿಯವರೆಗೆ ಮಾತುಕತೆಯನ್ನು ನಡೆಸಿ ಜಕಾರಿಯಾ ಮತ್ತು ಹರಿಲಾಲ ಪ್ರತ್ಯೇಕಗೊಂಡಾಗ ಇಬ್ಬರೂ ಸಹ ತಮ್ಮತಮ್ಮದೇ ಆದ ರೀತಿಯಲ್ಲಿ ಖುಷಿಗೊಂಡಿದ್ದರು.

* * *

ಮೇ ತಿಂಗಳು ಕಳೆದಿತ್ತು. ಬಿಸಿಲಿನ ಧಗೆಯಿಂದಾಗಿ ಮುಂಬೈ ಜನರ ಸ್ಥಿತಿ ಶೋಚನೀಯವಾಗಿತ್ತು. ಜೂನ್ ತಿಂಗಳ ಆಗಮನವಾಗುದರಲ್ಲಿತ್ತು. ಎಲ್ಲರೂ ಮುಂಗಾರು ಮಳೆಯನ್ನು ಕಾತುರದಿಂದ ನಿರೀಕ್ಷಿಸುತ್ತಿದ್ದರು. ಅತ್ತ ದೇಶದ ಗಡಿಗಳಾಚೆಗೆ ಅಂತರರಾಷ್ಟ್ರೀಯ ವಿಚಾರಗಳ ಬಗ್ಗೆ ಯುದ್ಧದ ಮೋಡಗಳು ಆವರಿಸುತ್ತಿದ್ದವು. ಜನರಿಗೆ ಭಯವಾಗುತ್ತಿತ್ತು.

ಮುಂಬೈಯಲ್ಲಿ ವದಂತಿಯೊಂದು ಹರಡಿದರೆ ಕ್ಷಣ ಮಾತ್ರದಲ್ಲಿಯೇ ಕೋಲಾಹಲ ಹಬ್ಬುತ್ತಿತ್ತು. ನೂರಾರು ಮೈಲಿಗಳ ಅಂತರದಲ್ಲಿದ್ದ ನಗರ ಅಥವಾ ಹಳ್ಳಿಯೊಂದರ ಮಸೀದಿ ಅಥವಾ ಮಂದಿರದ ಬಾಗಿಲ ಬಳಿ ಸತ್ತ ಹಂದಿಯೋ ಅಥವಾ ಸತ್ತ ಹಸುವೋ ಬಿದ್ದ ಸುದ್ದಿ ಬರುತ್ತಿತ್ತು; ಎಷ್ಟೋ ಜನ ಆ ಹಳ್ಳಿಯನ್ನು, ಆ ನಗರವನ್ನು, ಆ ಮಂದಿರ ಅಥವಾ ಮಸೀದಿಯನ್ನು ನೋಡಿರುವುದಿಲ್ಲ ಅಥವಾ ಅದರ ಹೆಸರನ್ನೂ ಕೇಳಿರುವುದಿಲ್ಲ,

ಅಂಥ ನೂರಾರು ಜನರು ಸಾಯಿಸಲು ಅಥವಾ ಸಾಯಲು, ಕೈಗಳಲ್ಲಿ ಆಯುಧಗಳನ್ನು ಹಿಡಿದು ಅಥವಾ ಕೈಗೆ ಸಿಕ್ಕ ಶಸ್ತ್ರಗಳನ್ನು ಹಿಡಿದು ಪಾಯಧುನಿಯ ಸರ್ಕಲ್‌ಗೆ ಬಂದು ಜಮಾಯಿಸುತ್ತಿದ್ದರು. ಆಗಾಗ ಮಂದಿರವೊಂದರ ಸಂಜೆಯ ಆರತಿಗಂಟೆಯ ಧ್ವನಿ, ಮಸೀದಿಯೊಂದರ ನಮಾಜಿನ ಶಾಂತಿಗೆ ಭಂಗ ತರುತ್ತಿತ್ತು; ಮುಲ್ಲಾವೊಬ್ಬರ ನಮಾಜು, ಸಮೀಪದ ಮಂದಿರವೊಂದರಲ್ಲಿದ್ದ ದೇವರ ನಿದ್ರೆಯನ್ನು ಕೆಡಿಸುತ್ತಿತ್ತು. ಅನೇಕ ಪೀಳಿಗೆಗಳಿಂದ ಒಂದೇ ಗಲ್ಲಿಯಲ್ಲಿ ಅಕ್ಕಪಕ್ಕ ವಾಸಿಸುವ ಜನರು ವಿಷವನ್ನು ಕಾರುತ್ತಿದ್ದರು. ಸಂಭಾವ್ಯ ಪಾಕಿಸ್ತಾನಕ್ಕೆ ಹೋಗದವರೂ ಸಹ ಪಾಕಿಸ್ತಾನದ ಜಪ ಮಾಡುತ್ತಿದ್ದರು. ಒಂದು ವೇಳೆ ಪಾಕಿಸ್ತಾನದ ಸೃಷ್ಟಿಯಾದರೆ, ತಾವೇ ಮೊಟ್ಟ ಮೊದಲ ರೈಲಿನಲ್ಲಿ ಕೂತು ತಮ್ಮ ಕರ್ತವ್ಯವನ್ನು ಪಾಲಿಸುತ್ತೇವೆ ಎಂಬ ಭಾವನೆಯುಳ್ಳ ವ್ಯಕ್ತಿಗಳಿಂದ ಗಲ್ಲಿಗಳು ತುಂಬಿದ್ದವು.

* * *

ಇಂಥ ಬಿಗುವಿನ ವಾತಾವರಣದಲ್ಲಿ ಮುಂಬೈನ ಒಂದು ಪ್ರಖ್ಯಾತ ಜುಮಾ ಮಸೀದಿಯ ಸಮೀಪದಲ್ಲಿ ನಮಾಜು ಓದುವ ವೇಳೆಗೆ ಒಂದು ಶುಕ್ರವಾರ ನಿಶ್ಶಬ್ದತೆ ಕವಿದಿತ್ತು. ಸಾಮಾನ್ಯವಾಗಿ ಭಾರಿ ಗದ್ದಲ ಮತ್ತು ಕೋಲಾಹಲದಿಂದಿರುತ್ತಿದ್ದ ಝುವೇರಿ ಬಜಾರ್, ಕಪಡಾ ಬಜಾರ್, ದವಾ ಬಜಾರ್ ಮತ್ತು ಜುಮಾ ಮಸೀದಿಯ ಸಮೀಪದ ವ್ಯಾಪಾರಿ ಪ್ರದೇಶಗಳು ಹಾಗೂ ವಸತಿ ಪ್ರದೇಶದ ಮನೆಗಳು, ಕಿವಿಯನ್ನು ನಿಮಿರಿಸಿಕೊಂಡು, ಎಲ್ಲವನ್ನು ತಡೆಹಿಡಿದುಕೊಂಡಂತೆ ನಿಂತಿದ್ದವು. ಜುಮಾ ಮಸೀದಿಯಿಂದ ಒಂದು ವೇಳೆ ಅನಿಷ್ಟದ ಘಟನೆ ಸಂಭವಿಸಿದರೆ, ಅದಕ್ಕೆ ಸೂಕ್ತ ರೀತಿಯಲ್ಲಿ ಆಕ್ರಮಣವೆಸಗಲು ಸಾಂಪ್ರದಾಯಿಕ ಶಕ್ತಿಗಳು ಟೊಂಕ ಕಟ್ಟಿ ನಿಂತಿದ್ದವು. ಏನು ಸಂಭವಿಸುತ್ತದೆ ಎಂಬ ವಾಸನೆ ಸಹ ಯಾರ ಮೂಗಿಗೂ ಬಡಿಯುತ್ತಿರಲಿಲ್ಲ, ಆದರೆ ಮಹತ್ತದ ಘಟನೆಯೊಂದು ಘಟಿಸುವುದರಲ್ಲಿದೆ ಎಂಬುದನ್ನು ಎಲ್ಲರೂ ತಿಳಿದಿದ್ದರು. ಯಾಕೆಂದರೆ, ಜುಮಾ ಮಸೀದಿಯಿಂದಲೇ ಜಕಾರಿಯಾ ಸಾಹೇಬರು ಇಂದು ಬೆಳಿಗ್ಗೆಯೇ ನಮಾಜಿನ ನಂತರದ ಪ್ರಾರ್ಥನೆಯಲ್ಲಿ, 'ಸಂಜೆಯ ನಮಾಜಿನ ನಂತರ ತಾವು ಒಂದು ಆಶ್ಚರ್ಯದ ಸುದ್ದಿಯನ್ನು ದೇಶಕ್ಕೆ ಮತ್ತು ವಿಶೇಷವಾಗಿ ಮುಸ್ಲಿಮ್ ಸಮಾಜಕ್ಕೆ ಕೊಡುತ್ತೇವೆ' ಎಂದು ಘೋಷಣೆಯನ್ನು ಮಾಡಿದ್ದರು. ಮುಸ್ಲಿಮ್ ಸಮಾಜಕ್ಕೆ ಪ್ರೇರಣೆ ಸಿಕ್ಕಿದಂತಾಗಿತ್ತು, ಇದಕ್ಕುತ್ತರದಲ್ಲಿ ಅಂಥದ್ದೇ ಕೋಲಾಹಲ ಹಿಂದೂಗಳಲ್ಲಿಯೂ ಹರಡಿತ್ತು.

ನಮಾಜಿನ ವೇಳೆಯಾಯಿತು. ಪ್ರಾರ್ಥನೆ ಮುಗಿಯಿತು. ಪಾಕ್ ಪರವರದಿಗಾರರ ಪ್ರಾರ್ಥನೆಯಲ್ಲಿ ತಲೆ ಬಾಗಿ ಅಲ್ಲಾಹ್‌ನಿಂದ ಆಶೀರ್ವಾದ ಬೇಡಲಾಯಿತು. ತಲೆಗಳು ಮೇಲಕ್ಕೆದ್ದವು. ಎಲ್ಲರ ದೃಷ್ಟಿ ಜಕಾರಿಯಾ ಸಾಹೇಬರ ಮೇಲೆ ಸ್ಥಿರವಾದವು. ಜಕಾರಿಯಾ ಸಾಹೇಬರು ಮಸೀದಿಯ ಒಂದು ಎತ್ತರದ ಜಾಗದಲ್ಲಿ ಬಂದು ನಿಂತರು. ಅವರ ಅಕ್ಕಪಕ್ಕದಲ್ಲಿ ನಾಲ್ಕೈದು ಮೌಲ್ವಿಗಳೊಂದಿಗೆ ಹರಿಲಾಲ ನಿಂತಿದ್ದ. ಹರಿಲಾಲನ ಹಳದಿ ಬಣ್ಣದ ಕೋಟಿನೊಳಗೆ ಜಾಕೇಟ್ ಇದ್ದು, ಅವನು ಪ್ಯಾಂಟ್ ಧರಿಸಿದ್ದ. ತಲೆಗೆ ಮುಸ್ಲಿಮರ ಟೋಪಿಯನ್ನು ಹಾಕಿಕೊಂಡಿದ್ದ. ಅಷ್ಟು ದೊಡ್ಡ ಗುಂಪಿನಲ್ಲಿ ಹರಿಲಾಲನನ್ನು ಯಾರೂ ಸಹ ಗುರುತಿಸಲು ಸಾಧ್ಯವಿರಲಿಲ್ಲ. ಒಂದು ವೇಳೆ ಇದಕ್ಕೂ ಮೊದಲು ಹರಿಲಾಲನನ್ನು ಯಾರಾದರೂ ನೋಡಿದ್ದರೂ, ಅವರಿಗೂ ಸಹ ಈ ಹೊಸ ಉಡುಪಿನಲ್ಲಿ ಹರಿಲಾಲನನ್ನು ಗುರುತಿಸುವುದು ಸಾಧ್ಯವಾಗುತ್ತಿರಲಿಲ್ಲ.

'ಪಾಕ್ ಪರವರದಿಗಾರ್ ಬಂಧುಗಳೇ' ಜಕಾರಿಯಾ ಸಾಹೇಬರ ಉತ್ಸಾಹದ ಧ್ವನಿ ಮಸೀದಿಯ ಗೋಡೆಗಳಲ್ಲಿ ಪ್ರತಿಧ್ವನಿಸಿತು. ಕಿಕ್ಕಿರಿದು ತುಂಬಿದ ಅಂಗಳದಲ್ಲಿ ಮೌನ ಕವಿಯಿತು.

'ಇಂದು ಇಸ್ಲಾಮಿನ ಏಳಿಗೆ ಮತ್ತು ಇದರ ವಿಜಯ ಪತಾಕೆಯಲ್ಲಿ ಮಹತ್ವದ ಅಧ್ಯಾಯವೊಂದು ಸೇರಿಕೊಳ್ಳುತ್ತಿದೆ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್...ಅಂದರೆ ಹಿಂದೂಗಳ ಕಾಂಗ್ರೆಸ್ ನೇತಾರರಾದ ಮಿಸ್ಟರ್ ಗಾಂಧಿಯವರ ಪುತ್ರ ಹರಿಲಾಲ್ ಗಾಂಧಿಯವರು ಇಂದು ಮಧ್ಯಾಹ್ನ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದಾರೆ.'

(ಸಶೇಷ)